ಏತ ನೀರಾವರಿ ಯೋಜನೆ

4120(4855); ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ

ಅ) ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ನಿಟ್ಟೂರು ಏತ ನೀರಾವರಿ ಯೋಜನೆ ತುಂಬಾ ಹಳೆಯದಾಗಿ ನಿಷ್ಕ್ರೀಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಯೋಜನೆಯನ್ನು ಪುನಶ್ಚೇತನಗೊಳಿಸಲು ಎಷ್ಟು ಅನುದಾನದ ಅವಶ್ಯಕತೆ ಇದೆ;

ಇ) ಈ ವರ್ಷದಲ್ಲಿ ಈ ಯೋಜನೆಯನ್ನು ಪುನಶ್ಚೇತನಗೊಳಿಸಲು ಸರ್ಕಾರ ಅನುದಾನ ಒದಗಿಸುವುದೇ?

ಶ್ರೀ ಶಿವರಾಜ್ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು)

ಅ) ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ನಿಟ್ಟೂರು ಏತ ನೀರಾವರಿ ಯೋಜನೆ ತುಂಬಾ ಹಳೆಯದಾಗಿದ್ದು ಸದರಿ ಯೋಜನೆಯ ನೀರಾವರಿ ಸಾಮರ್ಥ್ಯ ಗಣನೀಯವಾಗಿ ಕುಂಠಿತಗೊಂಡಿದೆ. ಈ ಯೋಜನೆಗೆ ಎರಡು, 100 ಅಶ್ವ ಶಕ್ತಿ ಸಾಮರ್ಥ್ಯದ ಹೊಸ ಸೆಂಟ್ರಿಫ್ಯೂಗಲ್ ಮೋಟರ್ ಪಂಪ್ ಅಳವಡಿಸುವ, ಶೇಖರಣಾ ತೊಟ್ಟಿ ಸುಧಾರಣೆ ಹಾಗೂ ರೈಜಿಂಗ ಮೇನ್ ಮತ್ತು ವಿತರಣೆ ಕಾಲುವೆ ದುರಸ್ತಿ ಮಾಡುವ ಅವಶ್ಯಕತೆ ಇರುತ್ತದೆ.

ಆ) ಈ ಯೋಜನೆಯನ್ನು ಪುನಶ್ಚೇತನಗೊಳಿಸಲು ₹ 100.00 ಲಕ್ಷ ಅನುದಾನದ ಅವಶ್ಯಕತೆ ಇದೆ.

ಇ) ಪ್ರಸ್ತುತ ವರ್ಷ ಸಣ್ಣ ನೀರಾವರಿ ಇಲಾಖೆಗೆ ಒದಗಿಸಬಹುದಾದ ಅನುದಾನದಲ್ಲಿ ಸದರಿ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.